
ಹಾಸ್ಯಗಾರ ತೋಳ

ಹಂಗೇರಿಯ ದೇಶದ ಜಾನಪದ ಕಥೆ

ವಾಲ್ ಬೈರೊ





ಹಾಸ್ಯಗಾರ ತೋಳ

ಹಂಗೇರಿಯ ದೇಶದ ಜಾನಪದ ಕಥೆ

ವಾಲ್ ಬೈರೊ



ಒಂದಾನೊಂದು ಕಾಲದಲ್ಲಿ ಒಬ್ಬ ರೈತನಿದ್ದ. ಅವನು ಕಡು ಲೋಭಿ ಮತ್ತು ಆಸೆಬುರುಕನಾಗಿದ್ದ. ಅವನೆಷ್ಟು ಆಸೆಬುರುಕನೆಂದರೆ, ಚಳಿಗಾಲದಲ್ಲಿ ಮನೆಯೊಳಗೇ ಕುಳಿತು ದಿನಕ್ಕೆ ಆರು ಸಲ ಊಟ ಮಾಡುತ್ತಿದ್ದ. ಹಾಗಾಗಿ ಅವನು ನೋಡಲು ದೊಡ್ಡ ಗುಡಾಣದಂತೆ ಕಾಣುತ್ತಿದ್ದ.






ಅವನ ಮನೆಯ ಹೊರಗಡೆ ಇರುವ ಕೊಟ್ಟಿಗೆಯಲ್ಲಿ ಒಂದು ಕುದುರೆ, ಒಂದು ಮೇಕೆ ಮತ್ತು ಒಂದು ಹಂದಿ ಸಾಕಿದ್ದ. ಆದರೆ ಅವಕ್ಕೆ ತಿನ್ನಲು ಏನನ್ನೂ ಕೊಡುತ್ತಿರಲಿಲ್ಲ. ಹಾಗಾಗಿ ಚಳಿಗಾಲ ಮುಗಿಯುವ ವೇಳೆಗೆ ಅವುಗಳು ಬಡವಾಗಿ ಬರೀ ಮೂಳೆ ತುಂಬಿದ ಚೀಲದಂತೆ ಕಾಣುತ್ತಿದ್ದವು.

ಹೀಗಿರುವಾಗು ಬೇಸಿಗೆ ಪ್ರಾರಂಭವಾಯಿತು. ರೈತ ತನ್ನ ಸಾಕು ಪ್ರಾಣಿಗಳನ್ನು ನೋಡಲು ಒಂದು ಮುಂಜಾನೆ ಕೊಟ್ಟಿಗೆಗೆ ಹೋದ. ಬಡಕಲಾಗಿ ನಿಂತಿದ್ದ ಅವುಗಳನ್ನು ನೋಡಿ ಆ ರೈತನಿಗೆ ಕೋಪ ಬಂತು. “ ನೋಡಿ ಹೇಗಾಗಿದ್ದೀರಿ?, ಚಳಿಗಾಲದಲ್ಲಿ ತಿಂದು ದಪ್ಪವಾಗಲು ನಿಮಗೇನು ಧಾಡಿ?. ನಿಮ್ಮಿಂದ ನನಗೇನು ಉಪಯೋಗ? ಎಂದು ಅಬ್ಬರಿಸಿದ. ಅಷ್ಟಲ್ಲದೆ, ಕೊಟ್ಟಿಗೆಯ ಬಾಗಿಲನ್ನು ತೆರೆದು ಅವುಗಳನ್ನು ಕಾಡಿಗೆ ಓಡಿಸುತ್ತಾ ಹೇಳಿದ. ‘
“ನಿಮ್ಮನ್ನು ತೋಳ ತಿಂದು ಹಾಕಲಿ”



ಅದೇನಾಯ್ತು ಅಂದ್ರೆ ಇದೇ ಸಮಯಕ್ಕೆ ಸರಿಯಾಗಿ ಒಂದು ತೋಳ ಹೊರಗಡೆ ಆಹಾರಕ್ಕಾಗಿ ಹೊಂಚು ಹಾಕುತ್ತ ಇತ್ತು. ಅದು ಈ ರೈತನ ಮಾತನ್ನು ಕೇಳಿಸಿಕೊಂಡಿತು. ಮೊದಲೇ ಹಸಿದಿತ್ತು ಅದೇ ಸಮಯಕ್ಕೆ ಆ ಕುದುರೆ ಕೊಟ್ಟಿಗೆಯಿಂದ ಹೊರ ಬಂತು ಅದನ್ನು ತೋಳ ಅಡ್ಡಗಟ್ಟಿತು ಮತ್ತೆ ಹೇಳಿತು ರೈತ ಹೇಳಿದಂತೆ ನಾನು ನಿನ್ನನ್ನು ತಿನ್ನುತ್ತೇನೆ



ಕುದುರೆ ಹೇಳಿತು. “ಸರಿ ಹಾಗಾದರೆ ಖಂಡಿತ ತಿನ್ನಬಹದುದು.ಆದರೆ ನೀನು ಈಗ ನನ್ನನ್ನು ತಿಂದರೆ ನಿನಗೆ ಏನೂ ಸಿಗುವುದಿಲ್ಲ. ನಾನು ಬರೀ ಮೂಳೆಗಳ ಚೀಲವಾಗಿದ್ದೇನೆ. ನನ್ನನ್ನು ಈಗ ಬಿಟ್ಟುಬಿಡು. ನಾನು ಆ ಗುಡ್ಡಕ್ಕೆ ಹೋಗಿ ಪೂರ್ತಿ ಬೇಸಿಗೆಯಲ್ಲಿ ಚೆನ್ನಾಗಿ ತಿಂದು ಬರುತ್ತೇನೆ. ಆಗ ನಾನು ಕೊಬ್ಬಿದ ಕುದುರೆಯಾಗಿರುತ್ತೇನೆ. ನಿನಗೆ ನನ್ನನ್ನು ತಿನ್ನಲು ತುಂಬಾ ಖುಷಿಯಾಗುತ್ತದೆ. ಇದನ್ನು ಕೇಳಿದ ತೋಳಕ್ಕೆ ಕುದುರೆ ಮಾತು ಸರಿ ಎನಿಸಿತು. ಅದು ಕುದುರೆಯನ್ನು ಹೋಗಲು ಬಿಟ್ಟಿತು.


ಸ್ವಲ್ಪ ಹೊತ್ತಿನ ನಂತರ ಆ ತೋಳ ರೈತನ ಹಂದಿಯನ್ನು ನೋಡಿತ್ತು ಅದಕ್ಕೆ ನಡೆಯಲೇ ಆಗುತ್ತಿರಲಿಲ್ಲ. ಅಷ್ಟು ಬಡವಾಗಿತ್ತು. ತೋಳ ಅದನ್ನು ಅಡ್ಡಗಟ್ಟಿ ಹೇಳಿತು. “ನಾನು ಆ ರೈತ ಹೇಳಿದಂತೆ ನಿನ್ನನ್ನು ತಿನ್ನುತ್ತೇನೆ.” ಅದನ್ನು ಕೇಳಿ ಹಂದಿ ಹೇಳಿತು. “ಒಪ್ಪಿದೆ. ಆದರೆ ನಾನೀಗ ಬರೀ ಮೂಳೆಗಳ ಚೀಲವಾಗಿದ್ದೇನೆ. ನನ್ನನ್ನು ಬಿಟ್ಟು ಬಿಡು. ಮಳೆಗಾಲದ ಹೊತ್ತಿಗೆ ನಾನು ನನ್ನ ಮರಿಗಳೊಂದಿಗೆ ಬರುತ್ತೇನೆ. ಆಗ ನಿನಗೆ ಒಳ್ಳೆಯ ಭೋಜನ ಸಿದ್ದ.” ಅದನ್ನು ಕೇಳಿದ ತೋಳಕ್ಕೆ ರಸಭರಿತ ಪುಟಾಣಿ ಮರಿಗಳ ಚಿತ್ತ ಕಣ್ಮುಂದೆ ಬಂದು “ಒಳ್ಳೆಯ ಯೋಚನೆ ಹೋಗು” ಎಂದು ಅದನ್ನು ಹೋಗಲು ಬಿಟ್ಟಿತು.




ಹೊತ್ತಿಗೆ ಕುರಿ ಅಲ್ಲಿಗೆ ಬಂತು. ತೋಳ ಅದರ ಎದುರು ಹಾರಿ ನಿಂತು ಹೇಳಿತು. “ ರೈತ ಹೇಳಿದಂತೆ ನಿನ್ನನ್ನು ತಿನ್ನುತ್ತೇನೆ”. “ ಓಹೋ ಖಂಡಿತವಾಗಿ” , ಕುರಿ ಹೇಳಿತು. “ಆದರೆ ನಾನೀಗ ಬರೀ ಮೂಳೆಗಳ ಚೀಲ. ನನ್ನನ್ನು ಬಿಡು, ನಾನು ಆ ಗುಡ್ಡಕ್ಕೆ ಹೋಗಿ ಬಂದ ಮೇಲೆ ನಿನಗೆ ಒಳ್ಳೆಯ ಔತಣ ಕಾದಿದೆ”. ಇದು ಹೇಳುವುದು ಸರಿಯಾಗಿಯೇ ಇದೆ ಎಂದು ತೋಳ ಮನಸ್ಸಿನಲ್ಲಿಯೇ ಯೋಚಿಸಿತು ಮತ್ತು ಕುರಿಯನ್ನು ಹೋಗಲು ಬಿಟ್ಟಿತು.



ತೋಳ ಪೂರ್ತಿ ಬೇಸಿಗೆಯನ್ನು ಬರುವ ಮಳೆಗಾಲದ ಅದ್ಭುತ ಭೋಜನದ ಕುರಿತು ಯೋಚನೆ ಮಾಡುತ್ತಾ ಕಾಲ ಕಳೆಯಿತು. ಅದಕ್ಕೆ ದಷ್ಟಪುಷ್ಟವಾದ ಕುದುರೆ. ಪೂರ್ತಿ ದುಂಡಗಾದ ಮೇಕೆ ಇದರ ಕುರಿತೇ ಕನಸು. ಇದರ ಜೊತೆಗೆ ಮಾಂಸ ತುಂಬಿದ ಹಂದಿ ಮತ್ತು ರಸಭರಿತವಾದ ಹಂದಿಯ ಮರಿಗಳು ಗುಡ್ಡದಿಂದ ಇಳಿದು ಬರುವ ಕನಸು! ಅಂತೂ ಮಳೆಗಾಲ ಬಂತು, ಯಾವ ಪ್ರಾಣಿ ಮೊದಲು ಬರುತ್ತದೆ ಎಂದು ತೋಳ ಚಡಪಡಿಸುತ್ತಿತ್ತು. ಅದಕ್ಕೆ ಕಾಯುವುದೇ ಕಷ್ಟಕರವಾಗಿತ್ತು.



ಮೊದಲು ಬಂದಿದ್ದು ಹಂದಿ ಅದಕ್ಕೆ ನಡೆಯಲೇ ಆಗುತ್ತಿರಲಿಲ್ಲ ಅಷ್ಟು ಗುಡಾಣ ಆಗಿತ್ತು ಅದರ ಹೊಟ್ಟೆ. ಅದರ ಜೊತೆಗೆ ಅದರ ಆರು ಮರಿಗಳು! “ ಕೊಟ್ಟ ಮಾತನ್ನು ಉಳಿಸಿಕೊಂಡದ್ದಕ್ಕಾಗಿ ಧನ್ಯವಾದಗಳು” ತೋಳ ಹೇಳಿತು. “ಬೇಗ ಬಾ, ನಿನ್ನನ್ನು ತಿನ್ನುತ್ತೇನೆ. ಪೂರ್ತಿ ಬೇಸಿಗೆ ಇದಕ್ಕಾಗಿ ಕಾಯುತ್ತಿದ್ದೆ”.




“ಖಂಡಿತ”, ಹಂದಿ ಹೇಳಿತು. “ಆದರೆ ಇನ್ನೂ ಸ್ವಲ್ಪ ಹೊತ್ತು ಕಾಯಿ, ಏಕೆಂದರೆ ಇನ್ನೂ ನನ್ನ ಮರಿಗಳಿಗೆ ಹೆಸರನ್ನೇ ಇಟ್ಟಿಲ್ಲ. ಏಕೆಂದರೆ ಗುಡ್ಡದಲ್ಲಿ ಯಾವುದೇ ಪಾದ್ರಿ ಇರಲಿಲ್ಲ. ಈ ಹೆಸರಿಲ್ಲದ ಮರಿಗಳನ್ನು ತಿನ್ನಲು ನಿನಗೆ ಸರಿ ಕಾಣುವುದಿಲ್ಲ, ಅಲ್ಲವೇ” ತೋಳ ಹಂದಿಯ ಮಾತನ್ನು ಒಪ್ಪಿತು. “ಹೌದು ಹೆಸರಿಲ್ಲದ ಮರಿಗಳನ್ನು ತಿನ್ನುವುದು ತುಂಬಾ ಕ್ರೂರತನ”

ಹಂದಿಗೆ ಈ ಮಾತನ್ನು ಕೇಳಿ ಮನ ತುಂಬಿ ಬಂತು. ಅದು ತೋಳಕ್ಕೆ ಹೇಳಿತು. “ನನ್ನ ಬಳಿ ಬಾ, ನಿನ್ನ ಕಿವಿಯಲ್ಲಿ ಆ ಮರಿಗಳ ಹೆಸರನ್ನು ಹೇಳುತ್ತೇನೆ”

ಕಿವಿಯಲ್ಲಿ ಮರಿಗಳ ಹೆಸರು ಹೇಳುವ ಬದಲು ತೋಳದ ಕಿವಿಯನ್ನು ಕಚ್ಚಿ ಹಿಡಿದು ಜೋರಾಗಿ ಅಲ್ಲಾಡಿಸತೊಡಗಿತು. ತೋಳಕ್ಕೆ ತನ್ನ ಕಿವಿ ಹರಿದುಹೋಗುತ್ತೇನೋ ಎಂದು ಭಯವಾಯಿತು. ಅದು ಕಿರುಚತೊಡಗಿತು. “ ಬೇಡ ನಿಲ್ಲಿಸು. ನಾನು ಹಾಸ್ಯಕ್ಕಾಗಿ ನಿನ್ನನ್ನು ತಿನ್ನುತ್ತೇನೆ ಎಂದು ಹೇಳಿದೆ ಅಷ್ಟೆ” ಎಂದಿತು.

ಆದರೆ ಹಂದಿ ಅದರ ಮಾತನ್ನು ಕೇಳಿಸಿಕೊಳ್ಳಲಿಲ್ಲ. ಅದು ಇನ್ನೂ ಜೋರಾಗಿ ಕಿವಿಗಳನ್ನು ಕಚ್ಚಿ ಹರಿದು ಹೋಗುವಂತೆ ಎಳೆಯತೊಡಗಿತು. ಅದರ ಮರಿಗಳೂ ತೋಳವನ್ನು ಎಲ್ಲೆಂದರಲ್ಲಿ ಕಚ್ಚಲು ತೊಡಗಿದವು.



ಅಂತೂ ಹೇಗೋ ಕಷ್ಟಪಟ್ಟು ಅವುಗಳಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದು ತೋಳದ ಅದೃಷ್ಟ ಎನ್ನಬೇಕು.

ತೋಳ ಕೊಂಚ ಸುಧಾರಿಸಿಕೊಳ್ಳುವ ಹೊತ್ತಿಗೆ ಮೇಕೆ ಅದರ ಕಣ್ಣಿಗೆ ಬಿತ್ತು. ಅದನ್ನು ನೋಡಿದ ಕೂಡಲೇ ತೋಳಕ್ಕೆ ಹಳೆಯ ಘಟನೆ ಮರೆತಂತಾಗಿ ಅದರ ಬಾಯಲ್ಲಿ ನೀರೂರಿತು.

“ನೀನು ಕೊಟ್ಟ ಮಾತಿನಂತೆ ದಪ್ಪಗಾಗಿ ನನ್ನಿಂದ ತಿನ್ನಲ್ಪಡಲು ಬಂದಿರುವುದು ನೋಡಿ ಸಂತೋಷವಾಯಿತು. ಆದರೆ ಆ ಹಂದಿಯಂತೆ ಏನೂ ಕೆಟ್ಟ ಉಪಾಯ ಹೂಡಿಲ್ಲ ತಾನೆ?” ಎಂದಿತು.




“ನಾನೇಕೆ ಹಾಗೆ ಮಾಡಲಿ? ನೀನು ತಿನ್ನಲಿಕ್ಕೆಂದೇ ನಾನು ದಪ್ಪಗಾಗಿ ಬಂದಿರುವುದಲ್ಲವೆ?” ಎಂದಿತು ಮೇಕೆ.

ಇದನ್ನು ಕೇಳಿ ತೋಳಕ್ಕೆ ಮನಸ್ಸು ತುಂಬಿ ಬಂತು. “ನಿನಗೆ ನೋವಾಗದಂತೆ ನಿನ್ನನ್ನು ತಿನ್ನುವೆ” ಎಂದು ಮೇಕೆಗೆ ಮಾತು ಕೊಟ್ಟಿತು.

“ತುಂಬಾ ಸಂತೋಷ, ನೀನೀಗ ನಿನ್ನ ಬಾಯನ್ನು ದೊಡ್ಡದಾಗಿ ತೆರೆ, ಅದರೊಳಗೆ ನಾನು ಹಾರಿ ಬಿಡುತ್ತೇನೆ. ನನ್ನನ್ನು ಇಡಿಯಾಗಿ ನುಂಗಬಹುದು” ಎಂದು ಮೇಕೆ ಹೇಳಿತು.

ಅದರಂತೆ ತೋಳ ತನ್ನ ಬಾಯನ್ನು ದೊಡ್ಡದಾಗಿ ತೆರೆದು ನಿಂತು ಕಣ್ಣು ಮುಚ್ಚಿಕೊಂಡಿತು. ಮೇಕೆ ತಲೆ ತಗ್ಗಿಸಿ ನುಗ್ಗಿತು. ಆದರೆ ಅದು ತೋಳದ ಬಾಯೊಳಗೆ ಬೀಳುವುದರ ಬದಲಾಗಿ....






ಎಷ್ಟು ಜೋರಾಗಿ ತೋಳಕ್ಕೆ ಗುದ್ದಿತೆಂದರೆ, ತೋಳ ಆಕಾಶಕ್ಕೆ ಚಿಮ್ಮಿ ಭೂಮಿಗೆ ಬಿತ್ತು. ಬಿದ್ದ ತೋಳಕ್ಕೆ ಮೇಕೆ ಮತ್ತೆ ಮತ್ತೆ ಗುದ್ದಿತು. ತೋಳ ಕಿರುಚುತ್ತಾ ಹೇಳಿತು. “ ಅಯ್ಯೋ! ಬೇಡ, ನಾನು ಹಾಸ್ಯಕ್ಕಾಗಿ ನಿನ್ನನ್ನು ತಿನ್ನುವೆ ಎಂದು ಹೇಳಿದ್ದು!” ಹಾಗೆ ಹೇಳಿ ಓಡಿ ಹೋಗಿ ಒಂದು ಪೊದೆಯಲ್ಲಿ ಅಡಗಿ ತನ್ನ ಗಾಯವನ್ನು ನೆಕ್ಕುತ್ತಾ ಕುಳಿತಿತು.



ಕೊಂಚ ಹೊತ್ತಿನಲ್ಲೇ ಕುದುರೆ ಅಲ್ಲಿಗೆ ಬಂತು. ದಷ್ಟಪುಷ್ಟವಾದ ಅದನ್ನು ನೋಡಿ ತೋಳಕ್ಕೆ ಬಾಯಲ್ಲಿ ನೀರೂರಿತು. ಹಸಿವೆ ಕೆರಳಿತು. “ ನೀನು ಮಾತು ತಪ್ಪದೆ ಬಂದಿದ್ದು ನೋಡಿ ಸಂತೋಷವಾಗಿದೆ. ಹತ್ತಿರ ಬಾ, ನಿನ್ನನ್ನು ಕುರುಂ ಕುರುಂ ಎಂದು ಅಗಿದು ತಿನ್ನುವೆ.” ಎಂದಿತು.

ಕುದುರೆ ಹೇಳಿತು. “ಒಳ್ಳೆಯದು. ಜಗಿದು ಜಗಿದು ತಿನ್ನುವೆಯಂತೆ. ಆದರೆ ಅದಕ್ಕೆ ಮೊದಲು ನಾನು ಹಳ್ಳಿಗೆ ಹೋಗಿ ಮದುಮಗಳನ್ನು ಮದುವೆಗೆ ಕರೆದುಕೊಂಡು ಹೋಗಬೇಕಿದೆ. ನಂತರ ಹಿಂದಿರುಗಿ ಬರುವೆ. ಆಗ ತಿನ್ನುವೆಯಂತೆ”


ತೋಳಕ್ಕೆ ಏನೋ ಮೋಸವಿದೆ ಎನಿಸಿತು. ಅದು ಹೇಳಿತು. “ನೀನು ಹೇಳಿದ್ದು ನಿಜವೇ ಎಂದು ಪರೀಕ್ಷಿಸಬೇಕು. ನಾನೂ ಹಳ್ಳಿಗೆ ಬರುವೆ”
“ ಸರಿ ಹಾಗಾದರೆ, ನ್ನ ಬೆನ್ನ ಮೇಲೆ ಕುಳಿತುಕೊ” ಎಂದು ಕುದುರೆ ಹೇಳಿತು. ಕುದುರೆ ತೋಳವನ್ನು ಬೆನ್ನ ಮೇಲೆ ಕೂರಿಸಿಕೊಂಡು ವೇಗವಾಗಿ ಹಳ್ಳಿಗೆ ಓಡಿತು.






ಹಳ್ಳಿಯಲ್ಲಿ ಜನರೆಲ್ಲಾ ಹೊಸ ಬಟ್ಟೆ ತೊಟ್ಟು ಮದುವೆ ಮೆರವಣಿಗೆಗೆ ಸಿದ್ಧವಾಗಿದ್ದರು.





ಜನರಿಗೆ ಕುದುರೆಯ ಮೇಲೆ ಕುಳಿತ ತೋಳವನ್ನು ನೋಡಿ ಆಶ್ಚರ್ಯವಾಯಿತು. ಕೆಲವರು ಹೆದರೆ ಓಡಿದರೆ ಕೆಲವರು ದೊಣ್ಣೆಯಿಂದ ಹೊಡೆದು ಕುದುರೆಯ ಬೆನ್ನಮೇಲಿಂದ ತೋಳವನ್ನು ಕೆಳಕ್ಕೆ ಕೆಡವಿದರು.

“ನನ್ನನ್ನು ಹೊಡೆಯಬೇಡಿ. ತಾನು ತಮಾಷೆ ಮಾಡಿದ್ದು” ತೋಳ ಗೋಗರೆಯಿತು. ಆದರೆ ಜನರು ಹೊಡೆಯುವುದನ್ನು ನಿಲ್ಲಿಸಲಿಲ್ಲ. ತೋಳ ಹೇಗೋ ಅವರಿಂದ ತಪ್ಪಿಸಿಕೊಂಡು ಕಾಡಿಗೆ ಓಡಿಹೋಯಿತು.



ಅದೇ ಸಮಯದಲ್ಲಿ ಒಬ್ಬ ಮರಗೆಲಸದವನು ಕಾಡಿನಲ್ಲಿ ಇದ್ದ. ಜನರ ಗಲಾಟೆ ಕೇಳಿ ಏನೆಂದು ಅತ್ತಿತ್ತ ನೋಡಿದ. ಒಂದು ತೋಳ ಓಡಿ ಬರುವುದನ್ನು ನೋಡಿದ. ಮರದ ಹಿಂದೆ ಅಡಗಿ ನಿಂತ. .

ತೋಳಕ್ಕೆ ಬಹಳ ಸುಸ್ತಾಗಿತ್ತು. ಅದು ಸೀದಾ ಅದೇ ಮರದ ಇನ್ನೊಂದು ಬದಿಗೆ ಬಂತು.

“ ನನ್ನಂತಹ ಮೂರ್ಖನಿಗೆ ಹೀಗೆ ಆಗಬೇಕು, ಬಡಿಗೆಯಿಂದ ಹೊಡೆತ ತಿಂದಿದ್ದು ಸರಿಯಾಗಿಯೇ ಇದೆ” ಎಂದು ತನಗೆ ತಾನೇ ಹೇಳಿಕೊಂಡಿತು.



“ ನಿನಗೆ ಬಡಿತವೇ ಬೇಕಿದ್ದರೆ, ತಗೋ ತಿನ್ನು, ಎಂದು ಮರಗೆಲಸದವನು ಬಡಿಗೆಯಿಂದ ತೋಳದ ತಲೆಗೆ ಜೋರಾಗಿ ಬಡಿದ. ಅದಕ್ಕೆ ತಲೆ ಸುತ್ತು ಬಂದಿತು.

“ ಅಯ್ಯೋ, ನಾನು ತಮಾಷೆಗೆ ಹೇಳಿದ್ದು” ಎನ್ನುತ್ತಾ ಅಲ್ಲಿಂದ ಸುರಕ್ಷಿತ ಸ್ಥಳಕ್ಕೆ ಓಡಿತು.



' “ಇದೆಂತಹಾ ಪ್ರಪಂಚ! ಜನರು ತಮಾಷೆಯನ್ನೂ ಸಹಿಸಲಾರರಲ್ಲಾ” ಎಂದು ತೋಳ ಯೋಚಿಸಿತು.